## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: : 917
2. ಸದಸ್ಯರ ಹೆಸರು : ಶ್ರೀ ಹೆಚ್.ಪಿ. ಸುಧಾಮ್ ದಾಸ್
3. ಉತ್ತರಿಸುವ ದಿನಾಂಕ : 22.02.2024
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:25.12.2023 ರ ಪ್ರಜಾವಾಣಿ ಪತ್ರಿಕೆಯ ವರದಿ ಅನ್ವಯ ಲಂಚ, ಅಕ್ರಮಗಳಿಗೆ ಮತ್ತು ಭ್ರಷ್ಟಾಚಾರಗಳ ಆರೋಪ ಹೊತ್ತಿರುವ ಅಧಿಕಾರಿಗಳ ವಿಚಾರಣೆಗೆ 22 ಇಲಾಖೆಗಳ 156 ಪ್ರಕರಣಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ಸರ್ಕಾರದಿಂದ ಅನುಮತಿ ದೊರೆತಿಲ್ಲದಿರುವ ಸಂಗತಿ ಬೆಳಕಿಗೆ ಬಂದ ನಂತರ ದಿನಾಂಕ:26.12.2023 ರಂದು ಸರ್ಕಾರವು ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಅನುಮತಿ ನೀಡುವ ಸಂಬಂಧ ಉಂಟಾಗುತ್ತಿರುವ ವಿಳಂಬ ನೀತಿ ಕುರಿತು ಹಾಗೂ ಸದರಿ ಅನುಮತಿ ನೀಡುವಿಕೆ ಪ್ರಕ್ರಿಯೆ ತ್ವರಿತಗೊಳಿಸಲು ನಿರ್ದೇಶನ ನೀಡುವುದಾಗಿ ವರದಿಯಾಗಿದ್ದು ಈ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿದೆಯೇ: | ದಿನಾಂಕ:25.12.2023ರ ಪ್ರಜಾವಾಣಿ ಪತ್ರಿಕೆಯ ವರದಿ ಅನ್ವಯ ಲಂಚ, ಅಕ್ರಮಗಳಿಗೆ ಮತ್ತು ಭ್ರಷ್ಟಾಚಾರಗಳ ಆರೋಪ ಹೊತ್ತಿರುವ ಅಧಿಕಾರಿಗಳ ವಿಚಾರಣೆಗೆ 22 ಇಲಾಖೆಗಳ 156 ಪ್ರಕರಣಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ಸರ್ಕಾರದಿಂದ ಅಭಿಯೋಜನಾ ಮಂಜೂರಾತಿ ನೀಡಿರುವ **ಪ್ರಕರಣಗಳು-87** ಹಾಗೂ ಅಭಿಯೋಜನಾ ಮಂಜೂರಾತಿ ನೀಡಲು ಬಾಕಿ ಇರುವ **ಪ್ರಕರಣಗಳು-43** ಇದ್ದು ಇಲಾಖಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>ಅಭಿಯೋಜನಾ ಮಂಜೂರಾತಿ ನೀಡುವ ಕುರಿತು ವಿಳಂಬ ನೀತಿ ಅನುಸರಿಸದಂತೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:26.12.2023 ರಂದು ನಡೆದ ಸಭೆಯಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ನಿರ್ದೇಶನ ನೀಡಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಅರೆ ಸರ್ಕಾರಿ ಪತ್ರದ ಮುಖೇನ ಸೂಕ್ತ ನಿರ್ದೇಶನ ನೀಡಲಾಗಿದೆ. |
| ಆ | ಅಧಿಕೃತ ಆದೇಶ ಹೊರಡಿಸಿದ ನಂತರ ಸರ್ಕಾರದ ಹಂತದಲ್ಲಿ ಇನ್ನೂ ಬಾಕಿ ಉಳಿದಿರುವ ಪ್ರಕರಣಗಳಿಗೆ ಲೋಕಾಯುಕ್ತದಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಭ್ರಷ್ಟಾಚಾರ ಆರೋಪಿತ ಅಧಿಕಾರಿಗಳ ವಿಚಾರಣೆ ಅನುಮತಿ ಪ್ರಸ್ತಾವನೆಗಳ ಇಲಾಖಾವಾರು ಪ್ರಕರಣಗಳ ಸಂಖ್ಯೆ ಎಷ್ಟು: | |
| ಇ) | ಭ್ರಷ್ಟಾಚಾರ ಆರೋಪಿತ ಅಧಿಕಾರಿಗಳ ವಿರುದ್ಧ ತನಿಖೆಗೆ ಸಂಬಂಧಿಸಿದಂತೆ ಲೋಕಾಯುಕ್ತದ ಪ್ರಸ್ತಾವನೆಗಳಿಗೆ ಸರ್ಕಾರದ ಅನುಮತಿ ನೀಡುವಲ್ಲಿ ಉಂಟಾಗುವ ವಿಳಂಬ ತಡೆಯುವ ಸಂಬಂಧ ಹಾಗೂ ನಿಗಧಿತ ಕಾಲಮಿತಿಯೊಳಗೆ ಅನುಮತಿ ನೀಡಲು ಹಾಗೂ ಈ ಮೂಲಕ ಭ್ರಷ್ಟಾಚಾರದ ವಿರುದ್ಧ ಸರ್ಕಾರ ಬದ್ಧತೆ ದೃಢಪಡಿಸಲು ಸರ್ಕಾರದ ವತಿಯಿಂದ ಯಾವುದಾದರೂ ಕಾರ್ಯಯೋಜನೆ ಇದೆಯೇ; ಇದ್ದಲ್ಲಿ ಸದರಿ ಯೋಜನೆಯ ರೂಪುರೇಷ ಏನು? | ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಸೆಕ್ಷನ್ 12(3)ರಡಿ ಲೋಕಾಯುಕ್ತ /ಉಪ ಲೋಕಾಯುಕ್ತರವರಿಂದ ಸ್ವೀಕರಿಸುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳು ಮೂರು ತಿಂಗಳೊಳಗಾಗಿ ಅಗತ್ಯ ಕ್ರಮ ಕೈಗೊಳ್ಳಲು ಸೆಕ್ಷನ್ 12(4) ರಡಿ ಅನುಸರಿಸಬೇಕಾದ ಕ್ರಮದ ಕುರಿತು ಕಾಲ ಕಾಲಕ್ಕೆ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. |

ಸಂಖ್ಯೆ:ಸಿಆಸುಇ 33 ಸೇಲೋಯು 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ.

## ಅನುಬಂಧ

### ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಲೋಕಾಯುಕ್ತ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಕಿಯಿದ್ದ 156 ಅಭಿಯೋಜನಾ ಮಂಜೂರಾತಿ ಪ್ರಕರಣಗಳ ವಿವರ

(ದಿನಾಂಕ:15.08.2023ರ ಅಂತ್ಯಕ್ಕೆ)

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಅಭಿಯೋಜನಾ ಮಂಜೂರಾತಿಯ ಒಟ್ಟು ಪ್ರಕರಣಗಳ ಸಂಖ್ಯೆ | ಮಂಜೂರಾತಿ ನೀಡಿರುವ ಪ್ರಕರಣಗಳ ಸಂಖ್ಯೆ | ಇನ್ನೂ ಪಿ.ಎಸ್.ಒ ನೀಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|
| 01 | ಲೋಕೋಪಯೋಗಿ ಇಲಾಖೆ (ಆರ್.ಡಿ.ಪಿ.ಆರ್. ಇಲಾಖೆಗೆ ಒಂದು ಪ್ರಕರಣವನ್ನು ವರ್ಗಾಯಿಸಿರುತ್ತಾರೆ) | 10-1=9 | 09 | 00 |
| 02 | ಸಿ.ಆ.ಸು. ಇಲಾಖೆ | 04 | 00 | 04 |
| 03 | · ಕಂದಾಯ ಇಲಾಖೆ | 26 | ಮಾಹಿತಿ ಒದಗಿಸಿರುವುದಿಲ್ಲ | |
| 04 | ನಗರಾಭಿವೃದ್ಧಿ ಇಲಾಖೆ | 17 | 15 | 02 |
| 05 | ಇಂಧನ ಇಲಾಖೆ | 10 | 02 | 08 |
| 06 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 05 | 05 | 0 |
| 07 | ಆರ್ಥಿಕ ಇಲಾಖೆ | 02 | 02 | 00 |
| 08 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಲೋಕೋಪಯೋಗಿ ಇಲಾಖೆಯ ಒಂದು ಪ್ರಕರಣ ಸೇರಿದಂತೆ) | 36+1=37 | 27 | 10 |
| 09 | ಶಿಕ್ಷಣ ಇಲಾಖೆ | 01 | 01 | 00 |
| 10 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | 03 | 03 | 0 |
| 11 | ಜಲಸಂಪನ್ಮೂಲ ಇಲಾಖೆ | 04 | 02 | 02 |
| 12 | ಸಾರಿಗೆ ಇಲಾಖೆ | 05 | 03 | 02 |
| 13 | ಸಣ್ಣ ನೀರಾವರಿ ಇಲಾಖೆ | 02 | 02 | 00 |
| 14 | ಒಳಾಡಳಿತ ಇಲಾಖೆ | 06 | 05 | 01 |
| 15 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | 14 | 00 | 14 |
| 16 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 02 | 02 | 00 |
| 17 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 01 | 01 | 00 |
| 18 | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ | 01 | 01 | 00 |
| 19 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ. | 02 | 02 | 00 |
| 20 | ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ | 02 | 02 | 00 |
| 21 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. | 02 | 02 | 00 |
| 22 | ಕರ್ನಾಟಕ ವಿಧಾನ ಸಭೆ ಸಚಿವಾಲಯ | 01 | 01 | 00 |
| | ಒಟ್ಟು | 156 | 87 | 43 |